ಮಂಜೂರಾಗಿದ್ದು ಅತಿ ಅವಶ್ಯವಾಗಿ ಹೆಚ್ಚುವರಿ ಶಿಕ್ಷಕರು ಬೇಕಾಗುವ ಶಾಲೆಗೆ ಹತ್ತಿರದ ಶಾಲೆಯಿಂದ ಶಿಕ್ಷಕರನ್ನು ನಿಯೋಜನೆ ಮೇಲೆ ತುಂಬಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಲಾಗಿದೆ.

ಇ) ಹೆಚ್ಚುವರಿ ಶಿಕ್ಷಕರ ಹುದ್ದೆಗಳನ್ನು ಮಂಜೂರು ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ರೂ. 10,000ಕ್ಕಿಂತ ಹೆಚ್ಚು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನ ಸಾಲಕ್ಕೆ ಸ್ಟಾಂಪ್ ಪೇಪರ್‌ನಿಂದ ವಿನಾಯಿತಿ ಪಡಿಸುವ ಬಗ್ಗೆ.

2222 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕಿನಿಂದ ರೈತರು ರೂ.10,000ಕ್ಕಿಂತ ಹೆಚ್ಚು ಸಾಲ ಪಡೆದರೆ ರೂ. 1000 ಕ್ಕೆ ರೂ.50ರಂತೆ ಸ್ಟಾಂಪು ಪೇಪರಿನಲ್ಲಿ ಕರಾರು ಮಾಡಬೇಕಾಗಿರುವುದು ಸರಿಯೇ?*

ಆ) *ಇದರಿಂದ ರೈತರಿಗೆ ಅನಾವಶ್ಯಕ ತೊಂದರೆಯಲ್ಲವೇ? ಇದನ್ನು ಸರಿಪಡಿಸಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು?*

ಶ್ರೀ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಇಲ್ಲ - ಸಣ್ಣ ಹಾಗೂ ಅತಿ ಸಣ್ಣ ರೈತರು ರೂ.15,000ದ ವರೆಗೆ ಪಡೆಯುವ ಸಾಲಕ್ಕೆ ಪೂರ್ಣ ಮುದ್ರಾಂಕ ಶುಲ್ಕ ವಿನಾಯಿತಿ ಇದೆ. ರೂ.15,000 ಕ್ಕೂ ಮೇಲ್ಪಟ್ಟಿದ್ದರೆ ಮಾತ್ರ ರೂ.1000ಕ್ಕೆ ರೂ.50 ರಂತೆ ಮುದ್ರಾಂಕ ಶುಲ್ಕವನ್ನು ಕೊಡಬೇಕಾಗಿದೆ.

ಆ) ಇಲ್ಲ, ಪ್ರಶ್ನೆ ಉದ್ಭವಿಸುವುದಿಲ್ಲ.

ಭತ್ಯೆ ನೀಡುವ ಬಗ್ಗೆ ಸಹಾಯಕ ವಿದ್ಯಾಧಿಕಾರಿಗಳಿಗೆ ತರಬೇತಿ ಭತ್ಯೆ ನೀಡುವ ಬಗ್ಗೆ.

2200 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಹಾಯಕ ವಿದ್ಯಾಧಿಕಾರಿಗಳಿಗೆ ಮತ್ತು ಶಾಲಾ ಇನ್ಸ್‌ಪೆಕ್ಟರರಿಗೆ ಶಾಲಾ ಸಂದರ್ಶನದ ಬಗ್ಗೆ ಯಾವ ತರಹದ ಭತ್ಯೆ ನೀಡಲಾಗುತ್ತಿದೆ?*

ಆ) *ಈ ಭತ್ಯೆಯು ಯಾವಾಗ ಮಂಜೂರಾಗಿರುತ್ತದೆ?*

ಇ) *ಈ ಭತ್ಯೆಯನ್ನು ಹಚ್ಚಿಸಬೇಕೆಂದು ಸರ್ಕಾರಕ್ಕೆ ಮನವಿಗಳೇನಾದರೂ ಬಂದಿರುತ್ತದೆಯೇ?*

ಈ) *ಬಂದಿದ್ದಲ್ಲಿ ಈ ಬಗ್ಗೆ ಸರಕಾರ ಯಾವ ತರಹದ ನಿರ್ಧಾರ ಕೈಗೊಂಡಿರುವುದು?*

ಶ್ರೀ ಎಂ. ವೀರಪ್ಪ ಮೊಯಿಲಿ, (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ನಿಗದಿತ ಪ್ರಯಾಣ ಭತ್ಯೆಯನ್ನು ನೀಡಲಾಗುತ್ತಿದೆ.

ಆ) ದಿನಾಂಕ : 1-4-1970ರಿಂದ ಮಂಜೂರಾಗಿರುತ್ತದೆ.

ಇ) ಬಂದಿದೆ.

ಈ) ಈಗ ನೀಡುತ್ತಿರುವ ನಿಗದಿತ ಪ್ರಯಾಣ ಭತ್ಯೆ ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.